# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 169 [28] |
| ಸದಸ್ಯರ ಹೆಸರು | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ [ವಿಧಾನಸಭೆ ಚುನಾವಣಾ ಕ್ಷೇತ್ರ] |
| ವಿಷಯ | ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಪಿಂಚಣಿ ಪಾವತಿಯ ವಿಳಂಬದ ಕುರಿತು. |
| ಉತ್ತರಿಸಬೇಕಾದ ದಿನಾಂಕ | 5/7/2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ದುರ್ಬಲರಿಗೆ ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಪಿಂಚಣಿ ನೀಡಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ. ಯೋಜನೆಗಳ ನಿಯಮಗಳೇನು [ಸರ್ಕಾರ ರೂಪಿಸಿರುವ ಯೋಜನೆಗಳ ಫಲಾನುಭವಿಗಳ ವಿವರಗಳನ್ನು ನೀಡುವುದು] | ಕರ್ನಾಟಕ ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ಅಶಕ್ತ ಹಾಗೂ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತಾ ಯೋಜನೆಗಳಡಿ ಆರ್ಥಿಕ ಸಹಾಯ ಒದಗಿಸುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತರಲು ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.<br>1. ವೃದ್ಧಾಪ್ಯ ವೇತನ<br>2. ವಿಧವಾ ವೇತನ<br>3. ಅಂಗವಿಕಲ ವೇತನ<br>4. ಸಂಧ್ಯಾ ಸುರಕ್ಷಾ ವೇತನ<br>5. ಮನಸ್ವಿನಿ ಯೋಜನೆ<br>6. ಮೈತ್ರಿ ಯೋಜನೆ<br>7. ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ<br>8. ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ<br>9. ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ<br>ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಸರ್ಕಾರ ರೂಪಿಸಿರುವ ನಿಯಮಗಳನ್ನು ಅನುಬಂಧ-1ರಲ್ಲಿ ನೀಡಿದೆ.<br>ಸಾಮಾಜಿಕ ಭದ್ರತಾ ಯೋಜನೆಗಳಡಿ ವಿವಿಧ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ. |
| ಆ | ವಿವಿಧ ಯೋಜನೆಗಳ ಪಿಂಚಣಿ ಸೌಲಭ್ಯಗಳ ಫಲಾನುಭವಿಗಳ ದಾಖಲೆಗಳನ್ನು ಹೊರ ಗುತ್ತಿಗೆದಾರರು ನಿರ್ವಹಿಸುತ್ತಿದ್ದು, ಪಿಂಚಣಿ ಪಾವತಿಯಲ್ಲಿ ಲೋಪವಾದಾಗ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ: ಈ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು: | ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳ ಅನುಷ್ಠಾನಕ್ಕಾಗಿ ತಾಲ್ಲೂಕು ಕಛೇರಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆದಿದ್ದು, ಸದರಿಯವರು ಬಿ.ಎಂ.ಎಸ್. ತಂತ್ರಾಂಶದಲ್ಲಿ ಫಲಾನುಭವಿಗಳ ದತ್ತಾಂಶ ನಿರ್ವಹಣೆ, ಪಿಂಚಣಿ ಪಾವತಿ ಸ್ಥಿತಿ ಬದಲಾವಣೆ, ಫಲಾನುಭವಿಗಳ ಕಡಾಯ ಮಾಹಿತಿಗಳನ್ನು ನಮೂದಿಸುವುದು ಮತ್ತು ಮಾಸಿಕ ವರದಿಗಳನ್ನು ಸಿದ್ಧಪಡಿಸುವುದು ಇಂತಹ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ : ಆರ್ ಡಿ 47 ಡಿಎಸ್ ಪಿ 2015, ದಿನಾಂಕ : 4/5/2016ರಂತೆ ಅಗತ್ಯ ದಾಖಲೆ ಒದಗಿಸುವುದು ಅರ್ಜಿದಾರರ ಜವಾಬ್ದಾರಿಯಾಗಿದ್ದು, ಅರ್ಜಿದಾರರು ಒದಗಿಸಿದ ಮಾಹಿತಿಯಿಂದ ಉಂಟಾಗುವ ತಪ್ಪಿಗೆ ಫಲಾನುಭವಿಗಳೆ ನೇರ ಹೊಣೆಗಾರರಾಗಿರುತ್ತಾರೆ. ಖಜಾನೆ-2 ತಂತ್ರಾಂಶಕ್ಕೆ ಕಳುಹಿಸುವಲ್ಲಿ ವಿಳಂಬವಾದಲ್ಲಿ ಸಂಬಂಧಪಟ್ಟ ನಾಡಕಛೇರಿ ಹಾಗೂ ತಾಲ್ಲೂಕು ಕಛೇರಿಯ ಶಿರಸ್ತೇದಾರ್ / ತಹಸೀಲ್ದಾರ್ ರನ್ನು ಅಧಿಕಾರಿ / ನೌಕರರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ತಾಂತ್ರಿಕ ತೊಂದರೆಯಿಂದ ಪಿಂಚಣಿ ಪಾವತಿ ವ್ಯತ್ಯಯವಾದಲ್ಲಿ ಬಾಕಿ ಪಿಂಚಣಿ ಪಾವತಿಗೆ ಅವಕಾಶವಿದೆ. |

| | | |
|---|---|---|
| ಇ | ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿ ಹಣ ಪ್ರತಿ ತಿಂಗಳು ಜಮೆಯಾಗದೇ ಫಲಾನುಭವಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ತಿಂಗಳಿನಿಂದ ಪಿಂಚಣಿ ಹಣ ಪಾವತಿ ಮಾಡುವುದು ಬಾಕಿ ಇದೇ: ಬಾಕಿ ಇಲ್ಲದಿದ್ದಲ್ಲಿ ಹಣ ಪಾವತಿ ಮಾಡಿರುವ ಮಾಹಿತಿ ನೀಡುವುದು. | ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ಮಾಹೆ ಖಜಾನೆಯಲ್ಲಿ ಬಿಲ್ಲು ತಯಾರಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.<br><br>ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಗಳನ್ನು *National payment corporation of India [NPCI]* ಮೂಲಕ ನಿರ್ವಹಿಸುತ್ತಿದ್ದು, ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / *IFSC CODE* ನಿಖರವಾಗಿ ನೀಡದೆ ಇರುವ ಕಾರಣ *NPCI* ನಿಂದ ಸ್ವೀಕೃತವಾದ *NO SUCH ACCOUNT / INVALID BANK DETAILS* ಕಾರಣದಿಂದ ಕೆಲವು ಪ್ರಕರಣಗಳಲ್ಲಿ ಪಿಂಚಣಿ ಪಾವತಿಯಾಗದೆ ಇರುವುದು ಕಂಡು ಬಂದಿದೆ.<br><br>ಸದರಿ ಪ್ರಕರಣಗಳನ್ನು ಭೌತಿಕ ಪರಿಶೀಲನೆಗೆ ಒಳಪಡಿಸಿ ಮಾಹಿತಿ ಸಂಗ್ರಹಿಸಿ ತಂತ್ರಾಂಶದಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ಪಿಂಚಣಿ ನಪಾವತಿ ಕಾರಣದೊಂದಿಗೆ ಪಡೆಯಲು ತಂತ್ರಾಂಶದಲ್ಲಿ ಅವ ಕಾಶ ಕಲ್ಪಿಸಿದೆ. ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಗತ್ಯ ದಾಖಲೆಗಳನ್ನು ಒದಗಿಸುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.<br>ರಾಜ್ಯಾದ್ಯಂತ ಮೇ 2023 ರವರೆಗೆ ಎಲ್ಲಾ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಪಿಂಚಣಿಯು ಸಂಬಂಧಪಟ್ಟ ಜಿಲ್ಲಾ ಖಜಾನೆಯ ಮೂಲಕ ಪಾವತಿಯಾಗಿರುತ್ತದೆ.<br>ಯೋಜನಾವಾರು ಪಿಂಚಣಿ ಪಾವತಿಯ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಿದೆ. |

**ಸಂಖ್ಯೆ: ಎಲ್ ಸಿಕ್ಯೂ 1/2023**

**[ಕೃಷ್ಣ ಬೈರೇಗೌಡ]**
**ಕಂದಾಯ ಸಚಿವರು**

**ಶ್ರೀ ಟಿ. ನಾರಾಯಣಸ್ವಾಮಿ (ವಿಧಾನಸಭೆ ಚುನಾವಣಾ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 169(28) ಕ್ಕೆ ಅನುಬಂಧ-1**
**ಸಾಮಾಜಿಕ ಭದ್ರತೆ ಯೋಜನೆಗಳಡಿ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆ / ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುತ್ತಿರುವ ನಿಯಮಗಳ ವಿವರ**

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| 1 | ವೃದ್ಧಾಪ್ಯ ವೇತನ | | ➢ 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ |
| | ವಯಸ್ಸು 60 ರಿಂದ 64 ವರ್ಷ | ರೂ. 600/- | | |
| | 65 ವರ್ಷ ಮೇಲ್ಪಟ್ಟು | ರೂ. 1200/- | | |
| 2 | ವಿಧವಾ ವೇತನ | ರೂ. 800/- | ➢ 18 ವರ್ಷ ಮೇಲ್ಪಟ್ಟ ವಿಧವೆಯರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಪತಿಯ ಮರಣ ದೃಢೀಕರಣ ಪತ್ರ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ |
| 3 | ಅಂಗವಿಕಲ ವೇತನ | | ➢ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಅಂಗವಿಕಲರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಅಂಗವಿಕಲತೆ ಶೇಕಡಾವಾರು ವೈದ್ಯಕೀಯ ದೃಢೀಕರಣ ಪತ್ರ. |
| | ಶೇಕಡ 40% ಅಂಗವಿಕಲತೆ ಹೊಂದಿರುವವರು | ರೂ. 800/- | | |
| | ಶೇಕಡ 75% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ರೂ. 1,400/- | | |
| | ಶೇಕಡ 75% ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರು | ರೂ. 2,000/- | | |
| 4 | ಸಂಧ್ಯಾ ಸುರಕ್ಷಾ ಯೋಜನೆ | ರೂ. 1,200/- | ➢ 65 ವರ್ಷ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರೀಕರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ |

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| 5 | ಮನಸ್ವಿನಿ ಯೋಜನೆ | ರೂ. 800/- | ➢ 40 ರಿಂದ 64 ವರ್ಷ ವಯಸ್ಸಿನೊಳಗಿನ ಅವಿವಾಹಿತ ಮಹಿಳೆಯರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಿಚ್ಛೇದಿತ ಪ್ರಮಾಣ ಪಡೆಯದಿದ್ದಲ್ಲಿ ಸ್ವಯಂ ದೃಢೀಕರಣ ಪತ್ರ |
| 6 | ಮೈತ್ರಿ ಯೋಜನೆ | ರೂ. 800/- | ➢ 25 ರಿಂದ 64 ವರ್ಷ ವಯಸ್ಸಿನೊಳಗಿನ ಲಿಂಗತ್ವ ಅಲ್ಪ ಸಂಖ್ಯಾತರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ಸ್ವಯಂ ದೃಢೀಕರಣ ಪತ್ರ ಅಥವಾ ಸಮುದಾಯ ಆಧಾರಿತ ಸಂಸ್ಥೆಗಳಾದ 'ಸಂಗಮ' ಮತ್ತು 'ಕೆ.ಎಸ್.ಎಂ.ಎಫ್.' ರಿಂದ ಪಡೆದ ಪ್ರಮಾಣ ಪತ್ರ |
| 7 | ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ | ರೂ. 2,000/- | ➢ ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತ ರೈತನ ಪತ್ನಿಯಾಗಿದ್ದು, ಕೃಷಿ ಇಲಾಖೆಯಿಂದ ರೈತರ ಆತ್ಮಹತ್ಯೆ ಪ್ರಕರಣಗಳಡಿ ಗುರುತಿಸಿ ಪರಿಹಾರ ಪಡೆದುಕೊಂಡಿರುವವರಿಗೆ | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ಕೃಷಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪ್ರತಿ |
| 8 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯ ಧನ | ರೂ. 10,000/- | ➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈಗಾಗಲೇ ಗುರುತಿಸಿ ಸುರಕ್ಷಾ ಯೋಜನೆಯಡಿ ಪರಿಹಾರ ಪಡೆದುಕೊಂಡಿರುವವರಿಗೆ | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪತ್ರ |
| 9 | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ<br>ಶೇಕಡ 25 ರಿಂದ 59% ಅಂಗವಿಕಲತೆ ಹೊಂದಿರುವವರು | ರೂ. 2,000/- | ➢ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುತಿಸಿರುವ ಫಲಾನುಭವಿಗಳು<br>➢ ಪರಿಷ್ಕೃತ ಆದೇಶ ಸಂಖ್ಯೆ : ಆರ್ ಡಿ 184 ಡಿಎಸ್‌ಪಿ 2019, ದಿನಾಂಕ : 3/6/2021 ರಂತೆ ಶೇಕಡ 25-59% ರೂ. 2,000/- ಮತ್ತು ಶೇಕಡ 60% ರ ಮೇಲ್ಪಟ್ಟು ರೂ. 4,000/- | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಆರೋಗ್ಯ ಇಲಾಖೆಯಿಂದ ಎಂಡೋಸಲ್ಫಾನ್ ಸಂತ್ರಸ್ಥರೆಂದು ಗುರುತಿಸಿದ ಬಗ್ಗೆ ಆದೇಶ |
| | ಶೇಕಡ 60% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ರೂ. 4,000/- | | |

# ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ [ವಿಧಾನಸಭೆ ಚುನಾವಣಾ ಕ್ಷೇತ್ರ] ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 169[28] ಕ್ಕೆ ಅನುಬಂದ-2

| ಕ್ರಮ ಸಂಖ್ಯೆ | ಯೋಜನೆಗಳು | ಒಟ್ಟು ಫಲಾನುಭವಿಗಳು | ಒಟ್ಟು ವೆಚ್ಚ 2023-24ರ ಮೇ ಅಂತ್ಯಕ್ಕೆ [ರೂ. ಕೋಟಿಗಳಲ್ಲಿ] |
|---|---|---|---|
| 1 | 2 | 3 | 4 |
| 1. | ವೃದ್ಧಾಪ್ಯ ವೇತನ | 1867663 | 535.72 |
| 2. | ವಿಧವಾ ವೇತನ | 1779453 | 406.72 |
| 3. | ಅಂಗವಿಕಲ ವೇತನ | 923468 | 334.43 |
| 4. | ಸಂಧ್ಯಾ ಸುರಕ್ಷಾ ವೇತನ | 3039543 | 1058.40 |
| 5. | ಮನಸ್ವಿನಿ ಯೋಜನೆ | 139912 | 32.87 |
| 6. | ಮೈತ್ರಿ ಯೋಜನೆ | 2076 | 0.47 |
| 7. | ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ | 4614 | 2.82 |
| 8. | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 47 | 0.14 |
| 9. | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ | 6756 | 5.57 |
| | ಒಟ್ಟು | 7763513 | 2377.13 |

## ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ [ವಿಧಾನಸಭೆ ಚುನಾವಣಾ ಕ್ಷೇತ್ರ] ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 169[28] ಕ್ಕೆ ಪೂರಕ ಟಿಪ್ಪಣಿ

ವಿಷಯ : ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಪಿಂಚಣಿ ಪಾವತಿಯ ವಿಳಂಬದ ಕುರಿತು.

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಒಟ್ಟು 9 ಮಾಸಿಕ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮಾಸಿಕ ಪಿಂಚಣಿ ಯೋಜನೆಗಳು :

1. ವೃದ್ಧಾಪ್ಯ ವೇತನ
2. ವಿಧವಾ ವೇತನ
3. ಅಂಗವಿಕಲ ವೇತನ
4. ಸಂಧ್ಯಾ ಸುರಕ್ಷಾ ವೇತನ
5. ಮನಸ್ವಿನಿ ಯೋಜನೆ
6. ಮೈತ್ರಿ ಯೋಜನೆ
7. ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ
8. ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯ ಧನ
9. ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರತಿ ಮಾಹೆಯಾನ ನಿಯಮಿತವಾಗಿ ಖಜಾನೆಯಲ್ಲಿ ಬಿಲ್ಲು ತಯಾರಿಸಿ *N.P.C.I.* ಮೂಲಕ ಫಲಾನುಭವಿಗಳ ಖಾತೆಗೆ ನೇರವಾಗಿ ಪಿಂಚಣಿ ಪಾವತಿಸಲು ಕ್ರಮವಹಿಸಲಾಗುತ್ತಿದೆ.

2022-23ನೇ ಸಾಲಿನಲ್ಲಿ 9263.88 ಕೋಟಿ ವೆಚ್ಚದೊಂದಿಗೆ ಮತ್ತು 77.63 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

2023-24ನೇ ಸಾಲಿನಲ್ಲಿ ಮಾಸಿಕ ಪಿಂಚಣಿ ಯೋಜನೆಗಳಿಗೆ 10132.46 ಕೋಟಿಗಳ ಅನುದಾನ ಒದಗಿಸಿದ್ದು, ಮೇ ಅಂತ್ಯಕ್ಕೆ 2377.13 ಕೋಟಿ ವೆಚ್ಚದೊಂದಿಗೆ ರಾಜ್ಯಾದ್ಯಂತ 7763513 ಲಕ್ಷ ಫಲಾನುಭವಿಗಳಿಗೆ ವಿವಿಧ ಪಿಂಚಣಿ ಯೋಜನೆಗಳಡಿ ಸೌಲಭ್ಯ ವಿತರಿಸಲಾಗಿದೆ.

ಫಲಾನುಭವಿಗಳನ್ನು ನಿಖರವಾಗಿ ಗುರುತಿಸುವಲ್ಲಿ ಹಾಗೂ ಕೇಂದ್ರ ಸರ್ಕಾರದ ಸೂಚನೆಯಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್ ಡಿ 153 ಡಿಎಸ್ ಪಿ 2014, ದಿನಾಂಕ : 23/1/2017 ರಂತೆ ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯುವಲ್ಲಿ ಆಧಾರ್ ಸಂಖ್ಯೆಯನ್ನು ಹಾಗೂ ನೇರ ಹಣ ಸಂದಾಯ ಯೋಜನೆ ಜಾರಿಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್ ಖಾತೆ ವಿವರ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಕೇಂದ್ರ ಸರ್ಕಾರದ ಸೂಚನೆಯನುಸಾರ ನೇರ ಹಣ ಸಂದಾಯ ಯೋಜನೆ ಶೇಕಡ 100% ರಷ್ಟು ಜಾರಿಗೊಳಿಸುವಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಎಸ್‌ಎಸ್ ಪಿ ಎಂಬಿಎಸ್ ಸಿ 56/2022, ದಿನಾಂಕ ; 23/8/2022ರ ರನ್ವಯ ವಿವಿಧ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಎಲ್ಲಾ ಫಲಾನುಭವಿಗಳು ಆಧಾರ್ ಜೋಡಣೆ ಮಾಡಲು ಹಾಗೂ ಬ್ಯಾಂಕ್ / ಅಂಚೆ ಖಾತೆ ವಿವರಗಳನ್ನು ನೀಡಲು ದಿನಾಂಕ : 15/9/2022 ರವರೆಗೆ ಗಡುವು ನಿಗದಿಪಡಿಸಿ ಈ ಕುರಿತಂತೆ ಫಲಾನುಭವಿಗಳ ಮಾಹಿತಿಗಾಗಿ ವ್ಯಾಪಕ ಪ್ರಚಾರವನ್ನು ಪತ್ರಿಕಾ ಮಾಧ್ಯಮ / ಅಂತರ್ಜಾಲ ಮುಖಾಂತರ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ / ಸ್ಥಳೀಯ ಮಟ್ಟದಲ್ಲಿ ಮಾಡುವ ಮೂಲಕ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾದಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅಲ್ಲದೇ ನಿರ್ದೇಶನಾಲಯದ ವತಿಯಿಂದ ಸಹ ಈ ಕುರಿತಂತೆ ಪ್ರಮುಖ ದಿನಪತ್ರಿಕೆಗಳಲ್ಲಿ ಹಾಗೂ ನಿರ್ದೇಶನಾಲಯದ ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲಾಗಿದೆ. ರಾಜ್ಯಾದ್ಯಂತ ರೇಡಿಯೋ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.

ಆದಾಗ್ಯೂ ದಿನಾಂಕ : 15/9/2022ರ ನಂತರ ಆಧಾರ್ ಜೋಡಣೆಗೆ ಬಾಕಿಯಿರುವ ಹಾಗೂ ಇ.ಎಂ.ಓ. ಮೂಲಕ ಪಿಂಚಣಿ ಪಡೆಯುತ್ತಿದ್ದ ಒಟ್ಟು 145859 ಲಕ್ಷ ಫಲಾನುಭವಿಗಳ ಪಿಂಚಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ಅಂತಹ ಪ್ರಕರಣಗಳಲ್ಲಿ ಫಲಾನುಭವಿಗಳು ತಮ್ಮ ಆಧಾರ್ ಮತ್ತು ಬ್ಯಾಂಕ್ / ಅಂಚೆ ಖಾತೆ ವಿವರಗಳನ್ನು ಸಲ್ಲಿಸಿದ ನಂತರ ಸಂಬಂಧಪಟ್ಟ ತಹಸೀಲ್ದಾರರು ಪಿಂಚಣಿ ಮರುಚಾಲನೆ ಗೊಳಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳನ್ನು ಮರು ಚಾಲನೆಗೊಳಿಸಿದ ನಂತರ ಅಂತಹ ಪ್ರಕರಣಗಳಲ್ಲಿ ಆ ಅವಧಿಯ ಪಿಂಚಣಿಯನ್ನು ಬಾಕಿ ರೂಪದಲ್ಲಿ ಪಾವತಿಸಲು ಅವಕಾಶ ನೀಡಿದೆ. ಇದುವರೆವಿಗೂ 68072 ಫಲಾನುಭವಿಗಳಿಂದ ಆಧಾರ್ / ಬ್ಯಾಂಕ್ ಮಾಹಿತಿ ಜೋಡಣೆಯೊಂದಿಗೆ ಪಿಂಚಣಿ ಮರು ಚಾಲನೆಗೊಳಿಸಿ ತಹಸೀಲ್ದಾರ್ ರು ಕ್ರಮ ವಹಿಸಿರುತ್ತಾರೆ. . 23178 ಫಲಾನುಭವಿಗಳ ಪಿಂಚಣಿಯನ್ನು ಮರಣ / ವಲಸೆ / ಅನರ್ಹ ಕಾರಣಗಳಿಂದ ರದ್ದುಗೊಳಿಸಲಾಗಿದೆ. 54609 ಫಲಾನುಭವಿಗಳ ಪಿಂಚಣಿಯು ಕಡ್ಡಾಯ ಮಾಹಿತಿ ಲಭ್ಯವಿಲ್ಲದೆ ಸ್ಥಗಿತಗೊಂಡಿರುತ್ತದೆ. ಎಲ್ಲಾ ಅಗತ್ಯ ಕ್ರಮಕ್ಕಾಗಿ ಜಿಲ್ಲೆಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

1. ನಿರ್ದೇಶನಾಲಯದಿಂದ ಒದಗಿಸಿರುವ ಗ್ರಾಮವಾರು ಪಟ್ಟಿಯನ್ನು ಗ್ರಾಮಲೆಕ್ಕಾಧಿಕಾರಿಗಳಿಗೆ ಹಂಚಿಕೆ ಮಾಡುವುದು.
2. ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿಗಳು ನಿರ್ದೇಶನಾಲಯದಿಂದ ಒದಗಿಸಲಾಗಿರುವ ಫಲಾನುಭವಿಗಳ ಪಟ್ಟಿಯನ್ವಯ ಆಧಾರ್ ನಂಬರ್, ಒಪ್ಪಿಗೆ ಪತ್ರ ಹಾಗೂ ಪಾಸ್ ಬುಕ್ ಪ್ರತಿಯನ್ನು (2 copies) ಪಡೆಯುವುದು.

3. ಫಲಾನುಭವಿಗಳಿಂದ ಪಡೆದ ಒಂದು ಪ್ರತಿಯನ್ನು ಉಪತಹಶೀಲ್ದಾರರಿಗೆ ಆಧಾರ್ ಸೀಡಿಂಗ್ ಮಾಡಲು ನೀಡುವುದು.
4. ಫಲಾನುಭವಿಗಳಿಂದ ಪಡೆದ ಇನ್ನೊಂದು ಪ್ರತಿಯನ್ನು ಬ್ಯಾಂಕ್ ಶಾಖೆವಾರು ವಿಭಜಿಸಿ, ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ಕಳುಹಿಸುವುದು.
5. ಬ್ಯಾಂಕ್ ಶಾಖೆ ವ್ಯವಸ್ಥಾಪಕರಿಂದ ಪ್ರತಿ ದಿನ NPCI Mapping ಪ್ರಗತಿ ವರದಿ ಹಾಗೂ e-KYC ಬಾಕಿ ಪಟ್ಟಿಯನ್ನು ಸಹ ಪಡೆಯುವುದು.
6. e-KYC ಮಾಡಿಸದ ಫಲಾನುಭವಿಗಳನ್ನು ಸಂಬಂಧಪಟ್ಟ ಬ್ಯಾಂಕ್‌ಗೆ ಕರೆದೊಯ್ಯುವುದು.
7. ಫಲಾನುಭವಿಯು ಹಾಸಿಗೆ ಹಿಡಿದಿದ್ದಲ್ಲಿ ಹಾಗೂ Bio-Metric ಸಾಧ್ಯವಾಗದೇ ಇಲ್ಲದ ಪ್ರಕರಣಗಳಲ್ಲಿ Exceptional Case ರಡಿ ಆಧಾರ್ ಸೀಡಿಂಗ್ ಮಾಡಿ ಅಂಚೆ ಇಲಾಖೆಯ ಮೂಲಕ NPCI Mapping ಮಾಡಿಸಲು ಕ್ರಮವಹಿಸುವುದು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಗತಿ ಪರಿಶೀಲನೆ ನಿಯಮಿತವಾಗಿ ನಡೆಸಲಾಗುತ್ತಿದೆ.

ಪ್ರಸ್ತುತ ರಾಜ್ಯಾದ್ಯಂತ 77.63 ಲಕ್ಷ ಅರ್ಹ ಫಲಾನುಭವಿಗಳಿಗೆ ಮೇ 2023ರ ಮಾಹೆಯವರೆವಿಗೂ ಪಿಂಚಣಿ ಪಾವತಿಸಲಾಗಿದೆ.